

ಡಾ.ವಿನೋದ ಛೆಬ್ಬಿ

ಕೇವಲ 'ಸಮಸ್ಯೆಪರಿಹಾರ'ದ ದೃಷ್ಟಿಕೋನದಿಂದ ನಿರ್ವಹಿಸಿದರೆ ದಾಂಪತ್ಯ ಚಿಕಿತ್ಸೆ ಫಲಪ್ರದ ಆಗಲಾರದು!

# 94: ದ್ವೇಷ ದುಃಖವಾಯಿತು

ಲೂಸಿ ಲೋಚನರ ದಾಂಪತ್ಯ ಚಿಕಿತ್ಸೆ ನಡೆಯುತ್ತಿದೆ. ಲೋಚನನನ್ನು ನಿಂದಿಸುವುದರ ಕಾರಣ ಅವನು ತನ್ನ ಪ್ರೀತಿಗೆ ತಕ್ಕವನಲ್ಲ ಎಂಬ ಒಳದೃಷ್ಟಿ ಲೂಸಿಗೆ ಹೋದಸಲ ಉಂಟಾಯಿತು. ಆಗ ಆಕೆ ಲೋಚನನನ್ನು ತಬ್ಬಿಕೊಂಡು ಅತ್ತದ್ದು ನೋಡಿದರೆ ಆಕೆಯ ಒಳದೃಷ್ಟಿಯು ಅವರ ಸಂಬಂಧದ ಮೇಲೆ ಉತ್ತೇಜಕ ಪ್ರಭಾವ ಬೀರಬಹುದು ಎನ್ನುವುದು ಸ್ಪಷ್ಟವಾಯಿತು. 'ಸಮಸ್ಯೆಪರಿಹಾರ'ದ ದೃಷ್ಟಿಕೋನದಿಂದ ನೋಡಿದರೆ ಬಹುಶಃ ಇಷ್ಟು ಸಹಾಯ ಸಾಕೇ ಸಾಕು, ಮುಂದಿನದನ್ನು ಅವರೇ ಬಗೆಹರಿಸಿಕೊಳ್ಳುತ್ತಾರೆ ಎಂದುಕೊಂಡೆ.

ಇಷ್ಟಾದರೂ ಒಂದು ವಿಷಯ ನನ್ನ ತಲೆತಿನ್ನಲು ಹಚ್ಚಿತು. ಹೋದಸಲ ಲೂಸಿ ಲೋಚನನನ್ನು ತಬ್ಬಿಕೊಂಡು ಅಳುತ್ತಿರುವಾಗಲೂ ದೇಹಭಾಷೆಯಲ್ಲಿ ಕಾಠಿಣ್ಯವನ್ನು ತೋರಿಸಿದ್ದು ನೆನಪಿಗೆ ಬಂತು. ಈ ಕಾಠಿಣ್ಯವು ಲೋಚನನ ಬಗ್ಗೆಯೆ? ಇರಲಿಕ್ಕಿಲ್ಲ ಹಾಗಿದ್ದರೆ ಆಕೆ ಅವನನ್ನು ತಬ್ಬಿಕೊಳ್ಳುತ್ತಲೇ ಇರಲಿಲ್ಲ. ಸಂಗಾತಿಯ ಹತ್ತಿರವಾಗಿ ಕಾಠಿಣ್ಯ ತೋರಿಸಿದ್ದು ಗಮನಿಸಿದರೆ ಬಹುಶಃ ಅದರ ಮೂಲಕ, 'ಇದನ್ನು ಅನುಭವಿಸುತಿರುವ ನನ್ನ ನೋವನ್ನು ಅರ್ಥಮಾಡಿಕೋ' ಎಂದು ಹಂಚಿಕೊಳ್ಳುವಂತಿದೆ ಅಂದರೆ ಕಾಠಿಣ್ಯವು ಇವರಿಬ್ಬರ ಸಂಬಂಧದಿಂದ ಹುಟ್ಟಿದ್ದಲ್ಲ! ಇದರ ಮೂಲವನ್ನು ಕಂಡುಹಿಡಿದು ಸರಿಪಡಿಸದ ಹೊರತೂ ಚಿಕಿತ್ಸೆ ಫಲಪ್ರದ ಆಗಲಾರದು ಎಂದು ಯೋಚಿಸುತ್ತಿರುವಾಗ ಲೂಸಿ ಲೋಚನ ಆಗಮಿಸಿದರು. ನಗುಮುಖದಿಂದ ಬರಮಾಡಿಕೊಂಡೆ.

'ಲೂಸಿ, ಒಂದುಕಡೆ ನೀವು ಲೋಚನರಿಗೆ ಪ್ರೀತಿ ಕೊಡುತ್ತಲೂ ಇನ್ನೊಂದು ಕಡೆ ಅದನ್ನು ಸ್ವೀಕರಿಸಲು ಲೋಚನ್ ಅವರಿಗಿರುವ ಅರ್ಹತೆಯನ್ನು ಪ್ರಶ್ನಿಸುತ್ತಲೂ ಇದ್ದೀರಿ ಎಂದು ತಿಳಿದುಕೊಂಡೆವು. ಇವೊತ್ತು ಇದರ ಬಗೆಗೇ ಇನ್ನಷ್ಟು ತಿಳಿಯೋಣವಂತೆ, ಆಗಬಹುದಾ?' ಆಕೆ ಸಮ್ಮತಿಸಿದಳು. ಆಕೆಯ ಕಾಠಿಣ್ಯದ ಮೂಲವನ್ನು ಸುಪ್ತಮನಸ್ಸಿನಿಂದ ಹೊರತರಲು ಉಪಾಯ ಯೋಜಿಸಿದೆ.

'ಲೂಸಿ, ಹೀಗೆ ಮಾಡೋಣವೆ? ನಾನು ನಿಮಗೆ ಸೂಚನೆ ನೀಡುತ್ತ ಹೋಗುತ್ತೇನೆ. ನೀವು ಅದರ ಪ್ರಕಾರ ಕಲ್ಪಿಸಿಕೊಳ್ಳುತ್ತ ಹೋಗಿ (ಸಮ್ಮತಿಸಿದಳು). ಸರಿ, ಮೊದಲು ಮೈಕೈ ಸಡಿಲಬಿಟ್ಟು ಆರಾಮವಾಗಿ ಕುಳಿತುಕೊಳ್ಳಿ.' ಲೂಸಿ ಮೈಕೊಡವಿಕೊಂಡು, ಸೋಫಾದಲ್ಲಿ ಒರಗಿ ವಿಶ್ರಮಿಸುತ್ತ ಕಣ್ಣುಮುಚ್ಚಿಕೊಂಡಳು. ನಾನು ಆಕೆಯ ಮನದಾಳದೊಳಗೆ ಹುಟ್ಟುವ ಸ್ವಚ್ಛಂದ ಅನಿಸಿಕೆಗಳಿಗೆ ಮಾತಿನ ರೂಪವನ್ನು ಕೊಡುವಂತೆ ಏಕತಾನದ ಮೃದುಸ್ವರದಲ್ಲಿ ಬಿಡಿಬಿಡಿಸಿ ಮಾತಾಡಿದೆ. 'ಈಗ ನಾನು ಹೇಳಿದಂತೆ ಅಂದುಕೊಳ್ಳಿ... ನಾನು ಲೋಚನನನ್ನು ತುಂಬಾ ಪ್ರೀತಿಸುತ್ತೇನೆ. ಅವನು ನನಗೆ ಬೇಕು. ಹಾಗೂ, ಅದಕ್ಕೆ ತಕ್ಕವನಲ್ಲ ಎನ್ನುವಾಗ ಅವನು ಬೇಡ ಎನ್ನಿಸುತ್ತದೆ... ಬೇಡ ಎನ್ನಿಸುವಾಗ ಅವನನ್ನು ಬಿಟ್ಟುಬಿಡಬೇಕು. ಬಿಡಬೇಕು ಎನ್ನಿಸಿದಾಗ ಬಿಡುವುದು ಬೇಡ ಎಂದುಕೊಳ್ಳುತ್ತೇನೆ. ಯಾಕೆಂದರೆ, ಅವನ ಜೊತೆಗಿರುವುದಕ್ಕೆ ಸರಳ ಕಾರಣ ಇದೆ... ಈ ಕಾರಣ ತುಂಬಾ ಸರಳವಾಗಿದೆ... ಅದೇನೆಂದರೆ' ಎನ್ನುತ್ತ ಮಾತು ಎಳೆದುಬಿಟ್ಟು, ಕೊಟ್ಟ ಕಲ್ಪನೆಯನ್ನು ಅಳವಡಿಸಿಕೊಳ್ಳಲು ಅವಕಾಶ ಕೊಟ್ಟು, ಆಕೆಯ ಉಸಿರು ಹಾಗೂ ಗಂಟಲನ್ನು ಗಮನಿಸುತ್ತಿದ್ದೆ. (ಯಾಕೆಂದರೆ, ನಾವು ಎಚ್ಚರಿರುವಾಗ ಆಗಾಗ ಉಗುಳು ನುಂಗುತ್ತಿರುತ್ತೇವೆ. ಆಗ ಕುತ್ತಿಗೆಯ ಮುಂಭಾಗದಲ್ಲಿರುವ ಧ್ವನಿಪೆಟ್ಟಿಗೆಯ ಗಂಟು ಮೇಲೇರಿ ಇಳಿಯುತ್ತದೆ. ಸಂಮೋಹಿನಿಗೆ ಒಳಪಟ್ಟಾಗ ಇದು ಚಲಿಸುವುದು ನಿಂತು. ಉಸಿರು ಸರಾಗವಾಗಿ ಹರಿಯುತ್ತದೆ.) ಲೂಸಿ ಸಂಮೋಹಿನಿಗೆ ಒಳಗಾದುದನ್ನು ಖಚಿತಪಡಿಸಿಕೊಂಡು ಏಕತಾನದ ಮೃದುಮಾತಿನಿಂದ ಸೂಚಿಸಿದೆ. 'ಈಗ ಗಮನವನ್ನು ನಿಮ್ಮ ಶರೀರದ ಮೇಲೆ ಹರಿಸಿ. ಶರೀರದಲ್ಲಿ ಏನೇನು ಸಂವೇದನೆ ಆಗುತ್ತದೆ ಎಂದು ಗಮನಿಸಿ. ಏನೇನು ಬದಲಾಗುತ್ತದೆ ಎಂದು ಗಮನಿಸಿ. ಅತಿಚಿಕ್ಕ ಸಂವೇದನೆಯ ಕಡೆಗೂ ಗಮನ ಕೊಡಿ.' ಸ್ವಲ್ಪ ಹೊತ್ತಿನ ನಂತರ ಅದ್ಭುತ ನಡೆಯಿತು!

ಮೈಮರೆತು ಕುಳಿತಿದ್ದ ಲೂಸಿಯ ಮೈಯೆಲ್ಲ ಬಿಗಿಯಾಯಿತು. ಮುಖದ ಸ್ನಾಯುಗಳು ಗಂಟುಗಟ್ಟಿದವು. ಮುಚ್ಚಿದ ಕಣ್ಣುಗಳಿಂದ ನೀರು ಕಣ್ಣೀರು ತೊಟ್ಟಿಕ್ಕಿತು. ತುಟಿಗಳು ಅಲುಗಿದವು. 'ನಮಗೆ ಯಾಕೆ ಮೋಸ ಮಾಡಿದೆ ನೀನು?' ಎಂದು ಉಸಿರಿದಳು. ಕೂಡಲೇ ಬೆಚ್ಚಿಬಿದ್ದು ಕಣ್ತೆರೆದಳು. ಅದನ್ನೇ ಕಾಯುತ್ತಿದ್ದ ನಾನು ಕೇಳಿದೆ: 'ಲೂಸಿ, 'ನಮಗೆ' ಎಂದಿರಿ. ಅದರ ಬಗೆಗೆ ಸ್ವಲ್ಪ ವಿವರಿಸುತ್ತೀರಾ? ಸುಧಾರಿಸಿಕೊಂಡು, ನಂತರ ಹೇಳಿ.' ಲೂಸಿ, 'ನಮ್ಮಪ್ಪ...' ಎಂದು ಹೇಳಲು ಹೋಗಿ ಗಂಟಲು ತುಂಬಿಬಂದು ಅಳಲು ಶುರುಮಾಡಿದಳು. ನಾನು ಮುಂಬಾಗಿ ಅವಳ ಮಂಡಿಯನ್ನು ಹಗುರವಾಗಿ ತಟ್ಟುತ್ತಿದ್ದೆ. ಚೇತರಿಸಿಕೊಂಡ ಲೂಸಿ ಹೇಳಿದ ಕತೆಯೇನು?

ಲೂಸಿ ಐದು ವರ್ಷದವಳಿರುವಾಗ ಅಪ್ಪ ಕೆಲಸ ಹುಡುಕಿಕೊಂಡು ಕೊಲ್ಲಿದೇಶಕ್ಕೆ ಹೋಗಬೇಕಾಯಿತು. ಗಂಡನ ಗೈರುಹಾಜರಿಯಲ್ಲಿ ಲೂಸಿಯ ತಾಯಿಯೇ ಜವಾಬ್ದಾರಿ ಹೊರಬೇಕಾಯಿತು. ಅಪ್ಪ ವರ್ಷಕ್ಕೊಮ್ಮೆ ರಜೆಗೆ ಬಂದವನು ಅರ್ಧಕ್ಕರ್ಧ ಸಮಯವನ್ನು ಇನ್ನೊಂದು ಮನೆಯಲ್ಲಿದ್ದ ತಾಯ್ತಂದೆಯರ ಆರೈಕೆಯಲ್ಲಿ ಕಳೆಯುತ್ತಿದ್ದು, ಹೆಂಡತಿ, ಮಗಳಿಗೆ ಅಷ್ಟಾಗಿ ಸಿಗುತ್ತಿರಲಿಲ್ಲ. ಲೂಸಿ ಅಪ್ಪನಿಗಾಗಿ ಪರಿತಪಿಸುತ್ತಿದ್ದಳು. ಅಂಥದ್ದರಲ್ಲಿ ಒಂದು ಅಪರಾತ್ರಿ ಲೂಸಿಗೆ ಥಟ್ಟನೆ ಎಚ್ಚರವಾಯಿತು. ಅಪ್ಪ ಅಮ್ಮ ಜಗಳವಾಡುತ್ತಿದ್ದುದನ್ನು ಕಂಡಳು. ಅಮ್ಮ ವಾಚಾಮಗೋಚರ ಬಯ್ಯುತ್ತಿರುವಾಗ ಅಪ್ಪ ಸಣ್ಣಸ್ವರದಲ್ಲಿ ಪ್ರತಿಭಟಿಸುತ್ತಿದ್ದ. ತಾನು ಪ್ರೀತಿಸುವ ಇಬ್ಬರೂ ಪರಸ್ಪರ ಕಾದುವುದನ್ನು ಕಂಡು, ಯಾರೊಬ್ಬರನ್ನೂ ನಂಬಲಿಕ್ಕಾಗದೆ ಅಭದ್ರತೆಯ ಭಯ ಆವರಿಸಿತು. ಅದಕ್ಕೆ ಅಪ್ಪನೇ ಕಾರಣನೆಂದು ಬೋಧೆಯಾಯಿತು. ಕ್ರಮೇಣ, ಅವನು ವಿದೇಶದಲ್ಲಿ ಪರಸ್ತ್ರೀಯ ಸಹವಾಸ ಇಟ್ಟುಕೊಂಡಿದ್ದು ಸ್ಪಷ್ಟವಾಗುತ್ತ, ಆಕೆಯ ಪರಿತಾಪ ದ್ವೇಷವಾಗಿ ಬದಲಾಯಿತು. ಅಮ್ಮನನ್ನು ಯಾಕೆ ಪ್ರೀತಿಸುತ್ತಿಲ್ಲ ಎಂದು ಅಪ್ಪನನ್ನು ಪ್ರಶ್ನಿಸುವ ಮನಸ್ಸಾಯಿತು. ಆದರೆ ದೊಡ್ಡವರನ್ನು ಎದುರುಹಾಕಿಕೊಳ್ಳಲು ಬುದ್ಧಿ ಸಾಲದಿರುವ ವಯಸ್ಸು ಅವಳದು. ಸಾಕಾಗದ್ದಕ್ಕೆ ಅಪ್ಪ ಕೈಗೆ ಸಿಗುವ ಅವಧಿಯೇ ಕಡಿಮೆ. ಹಾಗಾಗಿ ಅಪ್ಪ ಬಂದಾಗಲೆಲ್ಲ ದ್ವೇಷ ತೋರಿಸಿ ಅವನನ್ನು ದಂಗುಬಡಿಸುತ್ತಿದ್ದಳಷ್ಟೆ. ಹೀಗೆ ದ್ವೇಷವು ಹೊರಬರದೆ ಒಳಗೇ ಕುದಿಯುತ್ತಿತ್ತು. ಲೋಚನ ಸಿಕ್ಕಾಗ ಸ್ವಲ್ಪ ಕಾಲ ಅವನ ಪ್ರೀತಿಯಲ್ಲಿ ದ್ವೇಷ ಮರೆಯಾಗಿತ್ತು. ಆದರೆ ಅವನು ಲೂಸಿಯನ್ನು ಅಲಕ್ಷಿಸಿದ ದಿನ ಒಳಗೆ ಅದುಮಿಟ್ಟ ದ್ವೇಷ ಭುಗಿಲೆದ್ದಿತು. ಲೋಚನ ಪ್ರೀತಿಗೆ ಅರ್ಹನಲ್ಲ ಎಂದು ಅರಿವಾದಾಗ, ಅಪ್ಪನ ತರಹ ಇವನೂ ಪ್ರೀತಿಗೆ ಅರ್ಹನಲ್ಲ ಎಂಬ ಸಮಾನತೆಯನ್ನು ಕಂಡಳು. ಅಂದಿನಿಂದ ಅಪ್ಪನ ಬಗೆಗಿರುವ ದ್ವೇಷವನ್ನು ಲೋಚನನ ಮೇಲೆ ಹರಿಹಾಯಿಸಲು ಶುರುಮಾಡಿದ್ದಾಳೆ!

ಅಂತೂ ಅರಿವಿಲ್ಲದ್ದು ಅರಿವಿಗೆ ಬಂತು. ದ್ವೇಷ ದುಃಖವಾಗಿ ಹೊರಹರಿಯಿತು. ಆದರೆ ಒಳದೃಷ್ಟಿ ಪಡೆದರೆ ಸಾಲದು, ಬದಲಾವಣೆ ಆಗಬೇಕು. ಅದು ಹೇಗೆಂದು ಮುಂದಿನ ವಾರ ಹೇಳುತ್ತೇನೆ.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: www.medisex.org